127

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್
:www.cescmysore.org
ವೆಬ್ ಸೈಟ್:

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org


ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2018-19/ 4556-61 ದಿನಾಂಕ:11.01.2019 14

## ಸಭೆಯ ನಡಾವಳಿಗಳು

ದಿನಾಂಕ 21.12.2018 ರಂದು ಯಳಂದೂರು ಉಪವಿಭಾಗದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಯಳಂದೂರು ಉಪವಿಭಾಗಕ್ಕೆ ಸಂಬಂಧಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಕ್ರಮ |
|---|---|---|---|
| 1 | ಶ್ರೀ.ತಿಮ್ಮರಾಜೇ ಅರಸ್ ಯರಿಯೂರು | *ಕಬ್ಬಿಣದ ಕಂಬಗಳನ್ನು ಬದಲಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧ ಪಟ್ಟ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 2 | ಶ್ರೀ. ಚಿನ್ನಸ್ವಾಮಿ. ಚಾಮಲಾಪುರ | *ಕಬ್ಬಿನಗದ್ದೆಗೆ ಬೆಂಕಿ ಬಿದ್ದಿರುವ ಪರಿಹಾರವನ್ನು ಕೋರಿರುತ್ತಾರೆ. | * ಸೂಕ್ತ ದಾಖಲಾತಿ ಪಡೆದು ಮುಂದಿನ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು. |
| 3 | ಶ್ರೀ.ಕೆ. ಶಾಂತಮೂರ್ತಿ ಕೆಸ್ತೂರು | * ರವಿಶಂಕರ್ 63 ಕೆ.ವಿ.ಎ ಟಿಸಿ ಕೆಸ್ತೂರು ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಹಣ ಪಾವತಿಸಿದ್ದು ಮೂಲಭೂತ ಸೌಕರ್ಯ ಒದಗಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಬಂದಪಟ್ಟ ಏಜೆನ್ಸಿಯವರಿಂದ ತ್ವರಿತಗತಿಯಲ್ಲಿ ಕಾಮಗಾರಿಯನ್ನು ನಿರ್ವಹಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 4 | ಶ್ರೀ.ಪ್ರಸಾದ್ ಕೆಸ್ತೂರು | * ಕೆಸ್ತೂರು ಗ್ರಾಮದ ಬೀದಿಯಲ್ಲಿ ಲೂಸ್‌ಸ್ಪಾನ್ ಆಗಿರುವ ಕಂಬಗಳನ್ನು ಸರಿಪಡಿಸಲು ಕೋರಿರುತ್ತಾರೆ | * ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧ ಪಟ್ಟ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 5 | ಶ್ರೀ.ಪ್ರಕಾಶ್ (ರೈತ ಸಂಘ ಮುಖಂಡರು) ಹೊನ್ನೂರು | *ಐ.ಪಿ ಸ್ಥಾವರಕ್ಕೆ 3 ಫೇಸ್ 7 ಗಂಟೆಗೆ ಒಟ್ಟಾಗಿ ವಿದ್ಯುತ್ ಸರಬರಾಜು ನೀಡಬಾರದೆಂದು ಕೋರಿರುತ್ತಾರೆ.<br>*ಹೆಚ್ಚುವರಿ ಭಾರವಿರುವ ಪರಿವರ್ತಕ ಕೇಂದ್ರಗಳಿಗೆ ಹೆಚ್ಚುವರಿ ಟಿ.ಸಿ ಅಳವಡಿಸಲು ಕೋರಿರುತ್ತಾರೆ.<br>* ಎಲ್ಲಾ ಹಳ್ಳಿಗಳಲ್ಲೂ ವಿದ್ಯುತ್ ಮಾಪಕಗಳನ್ನು ಬದಲಾಯಿಸಿ ಹಳೆಯ ಬಾಕಿಯನ್ನು ಮನ್ನಾ ಮಾಡಬೇಕೆಂದು ಕೋರಿರುತ್ತಾರೆ. | * ಐ.ಪಿ.ಸ್ಥಾವರಗಳಿಗೆ ಸರ್ಕಾರದ ಸೂಚನೆ ಮೇರೆಗೆ ನಿರಂತರ 7 ಗಂಟೆ ವಿದ್ಯುತ್ ಸರಬರಾಜು ನೀಡುತ್ತಿರುವುದಾಗಿ ತಿಳಿಸಲಾಯಿತು.<br>* ಉಪವಿಭಾಗಾಧಿಕಾರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.<br>* ಸರ್ಕಾರದ ಆದೇಶದ ಮೇರೆಗೆ ಪ್ರಸ್ತುತ ಅನುಮೋದಿತ ಹಳ್ಳಿಗಳಲ್ಲಿ ಮಾಪಕ ಬದಲಾಯಿಸುತ್ತಿರುವುದಾಗಿ ತಿಳಿಸಲಾಯಿತು. |
| 6 | ಶ್ರೀ.ಮಹದೇವಶೆಟ್ಟಿ ಯರಿಯೂರು | *ಐ.ಪಿ ಸ್ಥಾವರಗಳಿಗೆ 3 ಫೇಸ್ 7 ಗಂಟೆ ಒಟ್ಟಾಗಿ ವಿದ್ಯುತ್ ನೀಡುತ್ತಿರುವಂತೆ ನಿರಂತರವಾಗಿ ನೀಡುವಂತೆ ಕೋರಿರುತ್ತಾರೆ.<br>* ಯರಿಯೂರು ಗ್ರಾಮ ಪರಿವರ್ತಕದಲ್ಲಿ ಪದೇ ಪದೇ ಫ್ಯೂಸ್ ಹೋಗುತ್ತಿರುವುದಾಗಿ ದೂರಿದರು. | * ಐ.ಪಿ.ಸ್ಥಾವರಗಳಿಗೆ ಸರ್ಕಾರದ ಸೂಚನೆ ಅನುಸಾರ ವಿದ್ಯುತ್ ಸರಬರಾಜು ನೀಡುವುದಾಗಿ ತಿಳಿಸಲಾಯಿತು.<br>* NH ರಸ್ತೆ ಅಗಲೀಕರಣ ಸಂದರ್ಭದಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಸುವುದಾಗಿ |

| | | | |
|---|---|---|---|
| | | * ನಮ್ಮ ಕಬ್ಬಿನ ಗದ್ದೆಯಲ್ಲಿ ವಿದ್ಯುತ್ ವೈರ್ ಹಾದು ಹೋಗಿದ್ದು, ಇದು ಜೋತುಕೊಂಡು ನೆಲಕ್ಕೆ ಬೀಳುವ ಸ್ಥಿತಿಯಲ್ಲಿದೆ ಇದನ್ನು ಸರಿಪಡಿಸಿಕೊಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. | ತಿಳಿಸಲಾಯಿತು.<br>* ಮದ್ಯಂತರ ಕಂಬ ಅಳವಡಿಸಲು ಕಾರ್ಯದೇಶವಾಗಿದ್ದು, ಬೆಳೆ ಇರುವ ಕಾರಣ ಕಾಮಗಾರಿ ತಡವಾಗಿರುವುದಾಗಿ ತಿಳಿಸಲಾಯಿತು. |
| 7 | ಶ್ರೀ.ರಮೇಶ್ ಉಪ್ಪಿನಮೋಳೆ | *ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಹಣ ಪಾವತಿಸಿದ್ದು ಮೂಲ ಭೂತ ಸೌಕರ್ಯ ಒದಗಿಸಲು ಕೋರಿರುತ್ತಾರೆ | * ಅಧೀಕ್ಷಕಇಂಜಿನಿಯರ್(ವಿ) ರವರು ಸಂಬಂದಪಟ್ಟ ಏಜೆನ್ಸಿಯವರಿಂದ ತ್ವರಿತಗತಿಯಲ್ಲಿ ಕಾಮಗಾರಿಯನ್ನು ನಿರ್ವಹಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು |
| 8 | ಶ್ರೀ.ಪುಟ್ಟಮಲ್ಲಪ್ಪ ಬೂದಿತಿಟ್ಟು. | *ಬೂದಿತಿಟ್ಟು ಕುರುಬಗೇರಿ ಟಿಸಿಯಲ್ಲಿ ಮದ್ಯಂತರ ಕಂಬಗಳನ್ನು ಅಳವಡಿಸಲು ಕೋರಿರುತ್ತಾರೆ.<br>*ಎಲ್ಲಾ ಹೆಚ್ಚುವರಿ ಭಾರವನ್ನು ಕಡಿಮೆಗೊಳಿಸಲು ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧ ಪಟ್ಟ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 9 | ಶ್ರೀ.ನಂಜುಂಡೇಗೌಡ ಯರಿಯೂರು | *200 ಕೆ.ವಿ.ಎ ಟಿ.ಸಿ ಗೆ ಹೆಚ್ಚುವರಿ ಟಿ.ಸಿ ಗಳನ್ನು ಅಳವಡಿಸಲು ಕೋರಿರುತ್ತಾರೆ. | * NH ರಸ್ತೆ ಅಗಲೀಕರಣದಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಸುವುದಾಗಿ ತಿಳಿಸಲಾಯಿತು. |
| 10 | ಶ್ರೀ.ವೀರಣ್ಣ ಯಳಂದೂರು | *ಲೂಸ್‌ಸ್ಪ್ಯಾನ್ ಸರಿಪಡಿಸಲು ಜಂಗಲ್‌ಕಟಿಂಗ್ ಮಾಡಲು ಮತ್ತು ಹಳೆವಾಹಕ ತೆಗೆದು ಹೊಸ ವಾಹಕ ಅಳವಡಿಸಲು ಕೋರಿರುತ್ತಾರೆ | *IPDS ಯೋಜನೆಯಡಿ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ತಿಳಿಸಲಾಯಿತು. |
| 11 | ಶ್ರೀ.ವೆಂಕಟರಂಗಶೆಟ್ಟಿ ಯರಿಯೂರು | *ಹೊಂಬಾಳಯ್ಯ 25 ಕೆ.ವಿ.ಎ ಟಿ.ಸಿ ಯಲ್ಲಿ 8 ಐ.ಪಿ ಸೆಟ್‌ಗಳಿದ್ದು ಹೆಚ್ಚುವರಿ ಟಿ.ಸಿ ಗಳನ್ನು ಅಳವಡಿಸಲು ಕೋರಿರುತ್ತಾರೆ. | * ಐ.ಪಿ ಸೆಟ್ ಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಯೋಜನೆಯಲ್ಲಿ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸುವುದಾಗಿ ತಿಳಿಸಲಾಯಿತು. |
| 12 | ಶ್ರೀ.ಸ್ವಾಮಿ ವಿದ್ಯುತ್ ಗುತ್ತಿಗೆದಾರರು | *ವಿದ್ಯುತ್ ಮಾಪಕಗಳು ಸುಲಭವಾಗಿ ದೊರಕುವಂತೆ ಕೋರಿರುತ್ತಾರೆ. | *ವಿವಿಧ ಯೋಜನೆಯಡಿ ಎಲ್ಲಾ ಜಿಲ್ಲೆಗಳಲ್ಲಿ ಮಾಪಕ ಬದಲಾವಣೆ ಕಾರ್ಯ ನಡೆಯುತ್ತಿದ್ದು ಮಾಪಕಗಳ ಕೊರತೆ ಉಂಟಾಗಿದೆ ಮುಂದಿನ ದಿನಗಳಲ್ಲಿ ಮಾಪಕಗಳು ಲಭ್ಯವಿರುತ್ತವೆ . ಎಂದು ತಿಳಿಸಲಾಯಿತು. |
| 13 | ಶ್ರೀ.ಶಾಂತರಾಜು ಯರಿಯೂರು | *ಕಬ್ಬಿಣದ ಕಂಬಗಳನ್ನು ಬದಲಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧ ಪಟ್ಟ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 14 | ಉಪ್ಪಾರಬೀದಿ, ಯಜಮಾನರುಗಳು ದುಗ್ಗಹಟ್ಟಿ. | *ಉಪ್ಪಾರ ಜನಾಂಗದ ಬೀದಿಯ ಚಾವಡಿಯ ಪಕ್ಕದಲ್ಲಿ ವಿದ್ಯುತ್ ಕಂಬವೊಂದು ಬೀಳುವ ಹಂತದಲ್ಲಿದೆ, ವಿದ್ಯುತ್ ಕಂಬವನ್ನು ಬದಲಿಸಿಕೊಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧ ಪಟ್ಟ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 15 | ಶ್ರೀ.ಸಿದ್ದಶೆಟ್ಟಿ ಬಿನ್ ಲೇ॥ ಬೆಂಡ್ಗಾಳಶೆಟ್ಟಿ ಯರಿಯೂರು. | *ಶ್ರೀ.ಶನೇಶ್ವರ ಟಿಸಿ ಯಲ್ಲಿ ಪದೇ ಪದೇ ಸಿಂಗಲ್‌ಫೇಸ್ ಆಗುವುದರಿಂದ ಮತ್ತು ಸರಿಯಾರಿ ಕರೆಂಟ್ ಬರುತ್ತಿಲ್ಲ ಆದ್ದರಿಂದ ನಮ್ಮ ಭಾಗದಲ್ಲಿ ಸುಮಾರು ಏಳು ಪಂಪ್‌ಸೆಟ್‌ಗಳು ಇರುವುದರಿಂದ ನಮಗೆ ಒಂದು ಟಿ.ಸಿ ಯನ್ನು | *ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |

| | | | |
|---|---|---|---|
| | | ಹಾಕಿಸಿಕೊಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. | |
| 16 | ಶ್ರೀ.ಎಸ್.ಮಹೇಶ ಬಿನ್ ಲೇ॥ ಶಂಕರಪ್ಪ ಯರಿಯೂರು | *ನಮ್ಮ ಜಮೀನಿನಲ್ಲಿ ಹಾದು ಹೋಗಿರುವ ಒಂದು ಕಂಬದಿಂದ ಒಂದು ಕಂಬಕ್ಕೆ ಅಂತರ ಜಾಸ್ತಿಯಾಗಿದ್ದು ವೈರ್‌ಗಳು ಜೋಳು ಬಿದ್ದಿದೆ ಹಾಗೂ ಒಂದು ಕಂಬ ಒಡೆದು ಹೋಗಿದೆ ಮತ್ತು ನಮ್ಮ ಜಮೀನಿನ ಹತ್ತಿರ ಇರುವ ಟಿ.ಸಿ ಯಿಂದ ಹೆಚ್ಚು ಸಂಪರ್ಕವನ್ನು ಕೊಡಲಾಗಿದೆ ಈ ಮದ್ಯ ಇರುವ ಒಂದು ಕಂಬಕ್ಕೆ ಗೈ ಯನ್ನು ಹಾಕಿಸಿಕೊಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. | *ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಕೊಳ್ಳೇಗಾಲ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಯಳಂದೂರು ಉಪವಿಭಾಗ ರವರ ಮಾಹಿಗಾಗಿ.
7. ಹಿಅಸ/ಪ್ರಕ/ಕಡತ.